# ತುಮಕೂರು ವಿಶ್ವವಿದ್ಯಾನಿಲಯ

## ವಿಶ್ವವಿದ್ಯಾನಿಲಯ ವಿಜ್ಞಾನ ಕಾಲೇಜು

ಬಿ.ಹೆಚ್. ರಸ್ತೆ, ತುಮಕೂರು. 572103 ದೂ.ಸಂ: 0816-2260220


ಸಂಖ್ಯೆ:ವಿವಿಕಾತು:2021-22: ದಿನಾಂಕ:22.09.2021

## : ಪ್ರವೇಶಾತಿ ಸೂಚನೆ :

----

ವಿಶ್ವವಿದ್ಯಾನಿಲಯ ವಿಜ್ಞಾನ ಕಾಲೇಜಿನ 2021-22 ನೇ ಶೈಕ್ಷಣಿಕ ಸಾಲಿಗೆ ಪ್ರಥಮ B.Sc. / BCA. & B.Voc ಪದವಿ ತರಗತಿಗಳಿಗೆ ಆನ್‌ಲೈನ್ ಮುಖಾಂತರ ಅರ್ಜಿಯನ್ನು ಆಹ್ವಾನಿಸಲಾಗಿದ್ದು, ಪ್ರವೇಶಾತಿಗಾಗಿ ದಿನಾಂಕ 15.09.2021 ರಿಂದ 23.09.2021 ರ ವರೆಗೆ ಕೌನ್ಸಲಿಂಗ್ ಮೂಲಕ ಜ್ಯೇಷ್ಠತಾ ಪಟ್ಟಿಯ ಆಧಾರದನ್ವಯ ಪ್ರವೇಶವನ್ನು ನೀಡಲಾಗುತ್ತಿದ್ದು, ಕೌನ್ಸಲಿಂಗ್ ನಂತರವೂ ವಿವಿಧ ಕೋರ್ಸುಗಳ ಉಳಿದ ಸೀಟುಗಳಿಗೆ ಈಗಾಗಲೇ ದಿನಾಂಕ:24.08.2021 ರಿಂದ 08.09.2021 ರ ಅವಧಿಯಲ್ಲಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಿ ಕೌನ್ಸಲಿಂಗ್‌ಗೆ ಹಾಜರಾಗದ/ಪ್ರವೇಶಾತಿ ಪಡೆಯದ ವಿದ್ಯಾರ್ಥಿಗಳಿಗೆ ದಿನಾಂಕ:24.09.2021 ರಂದು ಮೆರಿಟ್ ಕಮ್ ರೋಸ್ಟರ್ ನಿಯಮಾನುಸಾರ ವಿಶ್ವವಿದ್ಯಾನಿಲಯವು ದಿನಾಂಕ:14.09.2021ರಂದು ಪ್ರಕಟಗೊಳಿಸಿದ ಅಂತಿಮ ಜ್ಯೇಷ್ಠತಾ ಪಟ್ಟಿಯ ಆಧಾರದನ್ವಯ ಕೌನ್ಸಲಿಂಗ್ ನಡೆಸಿ ಪ್ರವೇಶಾತಿ ನೀಡಲಾಗುವುದು.

ಸದರಿ ದಿನಾಂಕದಂದು ಸರ್.ಎಂ. ವಿಶ್ವೇಶ್ವರಯ್ಯ ಸಭಾಂಗಣದಲ್ಲಿ ಬೆಳಗ್ಗೆ 9.30 ಗಂಟೆಗೆ ಈ ಕೆಳಕಂಡ ದಾಖಲೆಗಳ ಮೂಲ ಪ್ರತಿಗಳೊಂದಿಗೆ ಹಾಗೂ ಮೂರು ಸೆಟ್ ಜೆರಾಕ್ಸ್ ಪ್ರತಿಗಳನ್ನು ದೃಢೀಕರಿಸಿಕೊಂಡು ಹಾಜರಿರುವುದು.

1. ಪ್ರಾಂಶುಪಾಲರಿಂದ ದೃಢೀಕರಿಸಿರುವ ಅರ್ಹತಾ ಪರೀಕ್ಷೆ (ಪಿ.ಯು.ಸಿ) ಅಂಕಪಟ್ಟಿ/ತತ್ಸಮಾನ ಪರೀಕ್ಷೆಯ ಅಂಕಪಟ್ಟಿ.
2. ಹಿಂದೆ ವ್ಯಾಸಂಗ ಮಾಡಿದ ಕಾಲೇಜು ನೀಡಿದ ನಡತೆ ಪ್ರಮಾಣ ಪತ್ರ / ವರ್ಗಾವಣೆ ಪತ್ರ (ಟಿ.ಸಿ) (ನೀಡಿದ್ದ ಪಕ್ಷದಲ್ಲಿ)
3. ಜನ್ಮ ದಿನಾಂಕ ದೃಢೀಕರಣಕ್ಕಾಗಿ ಎಸ್.ಎಸ್.ಎಲ್.ಸಿ ಅಂಕಪಟ್ಟಿಯ ಪ್ರತಿ
4. ಚಾಲ್ತಿಯಲ್ಲಿರುವ ಜಾತಿ ಮತ್ತು ಆದಾಯ ಪ್ರಮಾಣ ಪತ್ರ (ಅನ್ವಯವಾಗುವವರೆಗೆ)
5. ಹೈದರಾಬಾದ್-ಕರ್ನಾಟಕ 371(ಜೆ) ಮೀಸಲಾತಿ ಅಡಿಯಲ್ಲಿ ಪ್ರವೇಶ ಪಡೆಯುವ ವಿದ್ಯಾರ್ಥಿಗಳು ಸಕ್ಷಮ ಪ್ರಾಧಿಕಾರದಿಂದ ಪಡೆದಿರುವ ಪ್ರಮಾಣ ಪತ್ರವನ್ನು ಲಗತ್ತಿಸಬೇಕು.
6. ವಿಕಲಚೇತನ ಮೀಸಲಾತಿ ಅಡಿಯಲ್ಲಿ ಪ್ರವೇಶ ಪಡೆಯುವ ವಿದ್ಯಾರ್ಥಿಗಳು ಸಕ್ಷಮ ಪ್ರಾಧಿಕಾರದಿಂದ ಪಡೆದಿರುವ ಪ್ರಮಾಣ ಪತ್ರವನ್ನು ಲಗತ್ತಿಸಬೇಕು.
7. ಇತರೆ ಮೀಸಲಾತಿ ಬಯಸುವವರು ಸಕ್ಷಮ ಪ್ರಾಧಿಕಾರದಿಂದ ಪಡೆದಿರುವ ಪ್ರಮಾಣ ಪತ್ರವನ್ನು ಲಗತ್ತಿಸುವುದು.
8. ಪಾಸ್‌ಪೋರ್ಟ್ ಅಳತೆಯ ಇತ್ತೀಚಿನ 3 ಭಾವಚಿತ್ರಗಳು
9. ಆಧಾರ್ ಗುರುತಿನ ಚೀಟಿ
10. ವಿದ್ಯಾರ್ಥಿಯ ಹೆಸರಿನಲ್ಲಿರುವ ಬ್ಯಾಂಕ್ ಪಾಸ್ ಬುಕ್

(ಮು.ತಿ.ನೋ)

**ವಿಶೇಷ ಸೂಚನೆ:**

1. ಪ್ರವೇಶ ಸಂದರ್ಭದಲ್ಲಿ ವಿದ್ಯಾರ್ಥಿಯ ಜೊತೆ ತಂದೆ/ಪೋಷಕರ ಖುದ್ದಾಗಿ ಹಾಜರಾಗಿ ಅಗತ್ಯವಾದ ದಾಖಲೆಗಳಿಗೆ ತಮ್ಮ ಒಪ್ಪಿಗೆಯನ್ನು ಸೂಚಿಸಿ ಸಹಿಯನ್ನು ಮಾಡುವುದು ಕಡ್ಡಾಯವಾಗಿರುತ್ತದೆ.
2. ಪ್ರವೇಶ ಶುಲ್ಕದ ವಿವರಗಳನ್ನು ವಿಶ್ವವಿದ್ಯಾನಿಲಯದ ವಿಜ್ಞಾನ ಕಾಲೇಜಿನ ವೆಬ್‌ಸೈಟ್ / ಕಾಲೇಜಿನ ಸೂಚನಾ ಫಲಕದಲ್ಲಿ ನೋಡಬಹುದಾಗಿದೆ.
3. ಪ್ರವೇಶಾತಿ ಪಡೆದ ವಿದ್ಯಾರ್ಥಿಗಳು ತಕ್ಷಣವೇ ಪ್ರವೇಶಾತಿ ಶುಲ್ಕವನ್ನು ವಿಜ್ಞಾನ ಕಾಲೇಜಿನ ವೆಬ್‌ಸೈಟ್ www.ucst.ac.in ನಲ್ಲಿ ಲಿಂಕ್ ಆಗಿರುವ SBI Collect ಮೂಲಕ ಆನ್‌ಲೈನ್‌ನಲ್ಲಿ ಪಾವತಿಸುವುದು.
4. ಪ್ರವೇಶಾತಿ ಶುಲ್ಕ ಪಾವತಿಸಿದ ನಂತರ ಮೂಲ ರಶೀದಿಯೊಂದಿಗೆ ಕಾಲೇಜಿನ ಕಚೇರಿಯ ಪ್ರವೇಶಾತಿ ವಿಭಾಗದಲ್ಲಿ ನೋಂದಣಿ ಮಾಡಿಸಿಕೊಳ್ಳುವುದು ಹಾಗೂ ರಶೀದಿಯ ಒಂದು ಪ್ರತಿಯನ್ನು ವಿದ್ಯಾರ್ಥಿಗಳು ತಮ್ಮ ಬಳಿಯೇ ಇರಿಸಿಕೊಳ್ಳುವುದು.
5. ವಿದ್ಯಾರ್ಥಿಗಳು ತಪ್ಪು ಮಾಹಿತಿ ನೀಡಿದಲ್ಲಿ ನಿಮ್ಮ ಅರ್ಜಿಯನ್ನು ಪರಿಗಣಿಸಲಾಗುವುದಿಲ್ಲ. ಒಂದು ವೇಳೆ ಯಾವುದೇ ಹಂತದಲ್ಲಿ ಕಂಡುಬಂದಲ್ಲಿ ಮುನ್ಸೂಚನೆ ಇಲ್ಲದೆ ಪ್ರವೇಶವನ್ನು ರದ್ದುಪಡಿಸಲಾಗುವುದು ಹಾಗೂ ಅಂತಹ ವಿದ್ಯಾರ್ಥಿಗಳ ವಿರುದ್ಧ ಕ್ರಮ ಜರುಗಿಸಲಗುವುದು.
6. ವಿದ್ಯಾರ್ಥಿಗಳು ಮತ್ತು ಪೋಷಕರು ಸರ್ಕಾರದ ಕೋವಿಡ್-19 ಮಾರ್ಗಸೂಚಿಯನ್ನು ಕಡ್ಡಾಯವಾಗಿ ಪಾಲಿಸುವುದು

ಪ್ರಾಂಶುಪಾಲರು

ಪ್ರಾಂಶುಪಾಲರು
ವಿಶ್ವವಿದ್ಯಾನಿಲಯ ವಿಜ್ಞಾನ ಕಾಲೇಜು
ತುಮಕೂರು-572 103